ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ದೇವಾಲಯಗಳು:

85 (46) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳ್ತಂಗಡಿ ತಾಲ್ಲೂಕಿನಲ್ಲಿ ಎಷ್ಟು ಹಿಂದೂ ದೇವಾಲಯಗಳು ಇವೆ, ಅವುಗಳಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟ ದೇವಾಲಯಗಳೆಷ್ಟು;

2) ಇವುಗಳಲ್ಲಿ ಅಭಿವೃದ್ಧಿಪಡಿಸಿದ ದೇವಾಲಯಗಳೆಷ್ಟು; ಸದರಿ ಕಾರ್ಯಕ್ಕಾಗಿ ಬಿಡುಗಡೆ ಮಾಡಿದ ಇಲಾಖಾ ಅನುದಾನವೆಷ್ಟು; ವಿವರ ನೀಡುವುದು;

3) ಇಲಾಖಾ ವ್ಯಾಪ್ತಿಗೆ ಬರುವ ದೇವಾಲಯದ ಅರ್ಚಕರಿಗೆ ವೇತನ, ವಸತಿ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಬಾಬುರಾವ್ ಬಸವಣಪ್ಪ ಚಿಂಚನೂರು (ಮುಜರಾಯಿ ರಾಜ್ಯ ಸಚಿವರು)

1) ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು 69 ಹಿಂದೂ ದೇವಾಲಯಗಳಿವೆ. ಇವುಗಳಲ್ಲಿ 67 ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿರುತ್ತವೆ.

2) ಅಭಿವೃದ್ಧಿಪಡಿಸಿದ ದೇವಾಲಯಗಳು-24 ಈ ಕಾರ್ಯಕ್ಕಾಗಿ 1989-90ರಿಂದ 1999-2000ರ ಸಾಲಿನವರೆಗೆ ಒಟ್ಟು ರೂ. 9.30 ಲಕ್ಷ ಅನುದಾನ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

3) ದೇವಾಲಯದ ಅರ್ಚಕರಿಗೆ ದೇವಾಲಯದ ಆದಾಯಕ್ಕೆ ಅನುಗುಣವಾಗಿ ವೇತನವನ್ನು ನೀಡಲಾಗುತ್ತದೆ. ಬೆಳ್ತಂಗಡಿ ತಾಲ್ಲೂಕಿನ ಒಟ್ಟು 13 ದೇವಸ್ಥಾನಗಳ ಅರ್ಚಕರಿಗೆ ದೇವಸ್ಥಾನದ ವತಿಯಿಂದ ವಸತಿ ಅವಕಾಶ ನೀಡಲಾಗಿದೆ. ಉಳಿದ ಧಾರ್ಮಿಕ ಸಂಸ್ಥೆಗಳ ಅರ್ಚಕರಿಗೆ ಅವರದೇ ಆದ ವಸತಿ ವ್ಯವಸ್ಥೆ ಹೊಂದಿರುತ್ತಾರೆ.

ಮನೆ ನಿವೇಶನಗಳಿಗಾಗಿ ಕಾದಿರಿಸಿದ ಜಮೀನನ್ನು ಅನ್ಯ ಉದ್ದೇಶಗಳಿಗೆ ಬಳಸಿರುವುದು:

86 (161) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬಡ ಕುಟುಂಬಗಳಿಗೆ ಮನೆ ನಿವೇಶನಗಳಿಗಾಗಿ ಕಾದಿರಿಸಿದ ಭೂಮಿಯನ್ನು ವಾಣಿಜ್ಯ ಸಂಕೀರ್ಣ ಮುಂತಾದ ಅನ್ಯ ಉದ್ದೇಶಗಳಿಗೆ ಬಳಸಲು ಸರ್ಕಾರ ಅವಕಾಶ ನೀಡಿದೆಯೇ;

2) ಇಲ್ಲವಾದಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಸರ್ಕಾರ ಇಲ್ಲಿಯವರೆವಿಗೆ ಪತ್ತೆ ಹಚ್ಚಿದೆ; ಇಂತಹ ಅಕ್ರಮ ಕಾರ್ಯವನ್ನು ಮಾಡಿದವರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

3) ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

1) ಇಲ್ಲ.

2) ಉದ್ಭವಿಸುವುದಿಲ್ಲ.

3) ಬೆಳ್ತಂಗಡಿ ತಾಲ್ಲೂಕಿನಲ್ಲಿ ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.

ಗಾಳಿಯಿಂದ ವಿದ್ಯುತ್ ಉತ್ಪಾದನೆ:

87 (278) ಶ್ರೀ ಪಾಟೀಲ್ ಡಿ.ಆರ್. (ಗದಗ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯಾದ್ಯಂತ ಗಾಳಿಯಿಂದ ವಿದ್ಯುತ್ ಉತ್ಪಾದಿಸುವ ಎಷ್ಟು ನೆಲೆಗಳಿವೆ; ಈ ಸಂಪನ್ಮೂಲ ಬಳಸಿ ಎಷ್ಟು ವಿದ್ಯುತ್ ಉತ್ಪಾದನೆ ಮಾಡಲಾಗಿದೆ; ಕಳೆದ ಮೂರು ವರ್ಷದ ವಿವರ ನೀಡುವುದು;

2) ಗದಗ ಜಿಲ್ಲೆ ಕಪ್ಪತ್ತಗುಡ್ಡದಲ್ಲಿ ಗಾಳಿ ಬಳಸಿ ವಿದ್ಯುತ್ ಉತ್ಪಾದಿಸಲು ಎಷ್ಟು ಕಂಪನಿಗಳಿಗೆ ಅವಕಾಶ ನೀಡಲಾಗಿದೆ;

3) ಅನುಮತಿ ಪಡೆದಿರುವ ಕಂಪನಿಗಳಲ್ಲಿ ಎಷ್ಟು ಕಂಪನಿಯವರು ವಿದ್ಯುತ್ ಉತ್ಪಾದನಾ ಘಟಕ ಸ್ಥಾಪಿಸಿದ್ದಾರೆ;

4) ಕಪ್ಪತ್ತಗುಡ್ಡದಲ್ಲಿ ಎಲ್ಲಾ ಘಟಕಗಳಿಂದ ಉತ್ಪಾದಿಸಲ್ಪಡುವ ವಿದ್ಯುತ್ ಎಷ್ಟು; ವಿದ್ಯುತ್ ಖರೀದಿಗೆ ಕೆ.ಇ.ಬಿ. ನೀಡುವ ದರ ಎಷ್ಟು; ಘಟಕವಾರು ವರ್ಷವಾರು ವಿವರ ನೀಡುವುದು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಕೇಂದ್ರ ಸರ್ಕಾರದ ಸಿ.ವೆಟ್ (ಸಿ-ಡಬ್ಲ್ಯೂಇಟಿ) ಎಂಬ ಸಂಸ್ಥೆ ನಡೆಸಿದ ಗಾಳಿಮಾಪನ ಸರ್ವೆ ಕಾರ್ಯದಿಂದ ಕರ್ನಾಟಕ ರಾಜ್ಯದಲ್ಲಿ 25 ನೆಲೆಗಳಿಂದ ಸುಮಾರು 1000 ಮೆಗಾ ವ್ಯಾಟ್ ಪವನ ವಿದ್ಯುತ್ ಉತ್ಪಾದನಾ ಶಕ್ತಿ ಇರುತ್ತದೆಂದು ಕಂಡು ಬಂದಿರುತ್ತದೆ. ಇದುವರೆಗೆ ಒಟ್ಟು 836 ಮೆಗಾ ವ್ಯಾಟ್ ಸಾಮರ್ಥ್ಯದ 48 ಯೋಜನೆಗಳನ್ನು ಅನುಮೋದಿಸಲಾಗಿದ್ದು ಇದರಲ್ಲಿ 9 ಘಟಕಗಳಲ್ಲಿ ಒಟ್ಟು 36.675 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಘಟಕ ಸ್ಥಾಪಿಸಲಾಗಿದ್ದು ಕಳೆದ ಮೂರು ವರ್ಷದ ವಿದ್ಯುತ್ ಉತ್ಪಾದನಾ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

2-3) ಗದಗ ಜಿಲ್ಲೆ ಕಪ್ಪತ್ತಗುಡ್ಡದ ಪ್ರದೇಶದಲ್ಲಿ 6 ಕಂಪನಿಗಳಿಗೆ ಒಟ್ಟು 50.50 ಮೆಗಾ ವ್ಯಾಟ್ ಸಾಮರ್ಥ್ಯದ ಗಾಳಿಯಂತ್ರ ಘಟಕ ಸ್ಥಾಪಿಸಲು ಅನುಮತಿ ನೀಡಲಾಗಿದೆ. ಇದರಲ್ಲಿ ಮೂರು ಕಂಪನಿಗಳು ಒಟ್ಟು 7.925 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಘಟಕವನ್ನು ಸ್ಥಾಪಿಸಿರುತ್ತಾರೆ. ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ.